# ಖಾಸಗಿ ಕ್ಷೇತ್ರದಲ್ಲಿ ಮೀಸಲು ಅಗತ್ಯ: ಕಾಂಚ ಐಲಯ್ಯ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ‘ಖಾಸಗಿ ವಲಯದಲ್ಲಿ ಉದ್ಯೋಗ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಬೇಕು’ ಎಂದು ಬರಹಗಾರ ಪ್ರೊ.ಕಾಂಚ ಐಲಯ್ಯ ಹೇಳಿದರು.

ಬಹುಜನ ವಿದ್ಯಾರ್ಥಿ ಸಂಘವು ಸೆಂಟ್ರಲ್ ಕಾಲೇಜಿನ ಸೆನೆಟ್ ಸಭಾಂಗಣದಲ್ಲಿ ಛತ್ರಪತಿ ಶಾಹು ಮಹಾರಾಜರ ಜನ್ಮ ದಿನದ ಅಂಗವಾಗಿ ಭಾನುವಾರ ಆಯೋಜಿಸಿದ್ದ ‘ಖಾಸಗಿ ವಲಯದಲ್ಲಿ ಮೀಸಲಾತಿ’ ವಿಷಯ ಕುರಿತು ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಕೃಷಿ ಅವಲಂಬಿತವಾಗಿದ್ದ ದೇಶವು ಇಂದು ಕೈಗಾರಿಕೆ ಮೇಲೆ ಅವಲಂಬಿತವಾಗಿದೆ. ಕೈಗಾರಿಕೆಯ ಅಭಿವೃದ್ಧಿಯು ದೇಶದ ಇಂದಿನ ಆರ್ಥಿಕತೆಯ ಬೆನ್ನೆಲುಬಾಗಿದೆ. ಕೈಗಾರೀಕರಣ ಮತ್ತು ಖಾಸಗೀಕರಣದಿಂದ ದೇಶದ ಕರಕುಶಲಕರ್ಮಿಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಶೋಷಿತರನ್ನು ಇನ್ನೂ ಶೋಷಣೆ ಮಾಡಲು ಖಾಸಗಿ ವಲಯವು ಮಾರ್ಗವನ್ನು ಒದಗಿಸಿದೆ’ ಎಂದು ವಿಷಾದಿಸಿದರು. ‘ಶೋಷಿತ ವರ್ಗವನ್ನು ಚಪ್ಪಲಿ ಹೊಲಿಯುವವರು, ಮಡಕೆ ಮಾಡುವವರು, ಬುಟ್ಟಿ ಹೆಣೆಯುವವರು, ಕೃಷಿ ಕಾರ್ಮಿಕರನ್ನು ಶ್ರಮಿಕ ವರ್ಗದವರೆಂದು ಕರೆಯಲಾಗುತ್ತದೆ. ಆದರೆ, ಕರಕುಶಲ ಕರ್ಮಿಗಳಾದ ಇವರು ತಮ್ಮ ಕೆಲಸ ಮಾಡುವುದನ್ನು ನಿಲ್ಲಿಸಿದರೆ, ಇಡೀ ದೇಶದ ಕಾರ್ಯಗಳೆಲ್ಲ ಸ್ಥಗಿತವಾಗುತ್ತವೆ’ ಎಂದರು.

‘ಖಾಸಗಿ ವಲಯಗಳು ಉದ್ಯೋಗದಲ್ಲಿ ಮೀಸಲಾತಿ ನೀಡದೆ, ದೇಶದಲ್ಲಿನ ಮೇಲ್ವರ್ಗ ಮತ್ತು ಕೆಳವರ್ಗ ಎಂಬ ಜಾತಿ ವಿಷ ಬೀಜಕ್ಕೆ ನೀರು ಹಾಕಿ ಪೊರೆಯುವ ಕೆಲಸವನ್ನು ಮಾಡುತ್ತಿವೆ. ಈಗ ಎಚ್ಚೆತ್ತುಕೊಂಡು ಖಾಸಗಿ ಸಂಸ್ಥೆಗಳನ್ನು ನಿಯಂತ್ರಿಸದಿದ್ದರೆ, ಮುಂದೆ ದೇಶಕ್ಕೆ ದೊಡ್ಡ ಗಂಡಾಂತರವೇ ಕಾದಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, ‘ಈಗ ಖಾಸಗಿ ವಲಯದಲ್ಲಿ ಉದ್ಯೋಗಗಳು ಹೆಚ್ಚುತ್ತಿವೆ. ಸರ್ಕಾರಿ ಸಂಸ್ಥೆಗಳಲ್ಲಿ ಉದ್ಯೋಗಗಳು ಕಡಿಮೆಯಾಗುತ್ತಿವೆ. ಈ ದೃಷ್ಟಿಯಿಂದ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಖಾಸಗಿ ಸಂಸ್ಥೆಗಳಲ್ಲಿಯೂ ಮೀಸಲಾತಿ ನೀಡಬೇಕು’ ಎಂದು ಒತ್ತಾಯಿಸಿದರು.

‘ಇಂದಿನ ಖಾಸಗಿ ವಲಯ ದೇಶದ ದುಡಿಮೆ ಸಂಸ್ಕೃತಿಯನ್ನು ನಾಶ ಮಾಡುತ್ತಿದೆ. ದೇಶದ ಜನರಲ್ಲಿ ಸ್ವಾರ್ಥ ಭಾವನೆಯನ್ನು ಬಿತ್ತುತ್ತಿದೆ. ಸಮಾಜವನ್ನು ಬಹುತ್ವದಿಂದ ಏಕತೆಯೆಡೆಗೆ, ವಿವೇಕದಿಂದ ಆರ್ಥಿಕ ಅವಿವೇಕದೆಡೆಗೆ ಸಾಗಿಸುತ್ತಿದೆ. ಇಂದು ಎಚ್ಚರಗೊಂಡು ಇದನ್ನು ವಿರೋಧಿಸುವ ತುರ್ತು ಅಗತ್ಯವಿದೆ’ ಎಂದರು.

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕಾನಾಥ್ ಮಾತನಾಡಿ, ‘ಉತ್ತರ ಪ್ರದೇಶದಲ್ಲಿ ಮಾಯಾವತಿ ಅವರು ಖಾಸಗಿ ಕಂಪೆನಿಯಲ್ಲಿ ರಾಜ್ಯದವರಿಗೆ ಶೇ 30 ರಷ್ಟು ಮೀಸಲಾತಿ ನೀಡಬೇಕೆಂದು ಆಗ್ರಹ ಮಾಡಿದರು. ಆ ರಾಜ್ಯದಲ್ಲಿ ಮೀಸಲಾತಿ ಜಾರಿಯಲ್ಲಿದೆ. ಹಾಗೆಯೇ ನಮ್ಮ ರಾಜ್ಯದಲ್ಲಿಯೂ ತುರ್ತು ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.



ಬಹುಜನ ವಿದ್ಯಾರ್ಥಿ ಸಂಘವು ಸೆಂಟ್ರಲ್ ಕಾಲೇಜಿನ ಸೆನೆಟ್ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ‘ಖಾಸಗಿ ವಲಯದಲ್ಲಿ ಮೀಸಲಾತಿ’ ವಿಷಯ ಕುರಿತು ವಿಚಾರ ಸಂಕಿರಣದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ, ಬರಹಗಾರ ಪ್ರೊ.ಕಾಂಚ ಐಲಯ್ಯ, ಬಿಎಸ್‌ಎನ್‌ಎಲ್ ಚಂದ್ರಶೇಖರ್, ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕಾನಾಥ್, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಅಧ್ಯಕ್ಷ ಮುಹಮ್ಮದ್ ಅಶ್ರಫ್, ಬಿವಿಎಸ್‌ನ ಅಧ್ಯಕ್ಷ ಎಸ್.ಅನಂತನಾಯಕ್ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ